# ಬಿಲ್ವಪತ್ರೆ

## ಅರ್ಚನೆಗೂ, ಔಷಧಿಗೂ..



ಚಿತ್ರ–ಬರಹ:
**ಸುರೇಶ್ ಸಿ.ಎಸ್.**



ಶಿವರಾತ್ರಿ ಹಬ್ಬದಂದು ಶಿವನನ್ನು ಪೂಜಿಸಲು ಬಿಲ್ವಪತ್ರೆ ಬೇಕು. ಶಿವನಿಗೆ ಬಿಲ್ವಪತ್ರೆ ಇಲ್ಲದೆ ಪೂಜೆ ಇಲ್ಲ ಎಂಬ ನಂಬಿಕೆ ಇದೆ. ಪೂಜಾ ಕಾರ್ಯಗಳಲ್ಲಿ ಬಳಸುವ ಬಿಲ್ವಪತ್ರೆಯಲ್ಲಿ ಹಲವು ಔಷಧೀಯ ಗುಣಗಳಿವೆ. ಆಯುರ್ವೇದ ಔಷಧಗಳಲ್ಲಿ ಉಪಯೋಗಿಸುವ ಅತ್ಯಂತ ಪ್ರಮುಖ ಸಸ್ಯಗಳಲ್ಲಿ ಬಿಲ್ವಪತ್ರೆಯೂ ಒಂದು.

ಎಲ್ಲಾ ವಾತಾವರಣಕ್ಕೆ ಹೊಂದಿಕೊಂಡು ಬೆಳೆಯುವ ಬಿಲ್ವಪತ್ರೆ ವೃಕ್ಷವನ್ನು ದೇವಾಲಯಗಳಲ್ಲಿ, ಮನೆಯಂಗಳದಲ್ಲಿ ನೆಟ್ಟು ಬೆಳೆಸುತ್ತಾರೆ. ಹಿಂದಿಯಲ್ಲಿ ಬೇಲ್ (ಶ್ರೀಫಲ) ಎಂದು ಕರೆಯುತ್ತಾರೆ. ಈ ಮರ 35ರಿಂದ 45 ಅಡಿಗಳಷ್ಟು ಎತ್ತರಕ್ಕೆ ವಿಶಾಲವಾಗಿ ಬೆಳೆಯಬಲ್ಲದು. ಮರದೆಲ್ಲೆಡೆ ಮುಳ್ಳುಗಳಿಂದ ಆವೃತವಾದ ಸಣ್ಣದಾದ ಮೂರು ಎಲೆಯ ಬಿಲ್ವಪತ್ರೆ ಹರಡಿರುತ್ತದೆ. ಶಿವನ ಪೂಜೆಯಲ್ಲಿ ಬಿಲ್ವಪತ್ರೆಯು ಪರಮಪವಿತ್ರವೆಂದು ಪರಿಗಣಿಸಲಾಗಿದೆ. ಬಿಲ್ವ ಶಿವದ್ರುಮ, ಬೇಲ್, ಬಿಲ್ಲತ್ರ ಮೊದಲಾದ ಹೆಸರುಗಳಿಂದ ಕರೆಯಲ್ಪಡುವ ಬಿಲ್ವದ ಎಲೆ, ಕಾಯಿ, ಬೇರು ಅತ್ಯುತ್ತಮವಾದ ಔಷಧೀಯ ಗುಣಗಳನ್ನು ಹೊಂದಿದೆ.

ಬಿಲ್ವಪತ್ರದ ಕೊಂಬೆ ರೆಂಬೆ ಬುಡಗಳೆಲ್ಲ ದಪ್ಪನೆಯ ಮುಳ್ಳುಗಳಿಂದ ತನ್ನನ್ನು ರಕ್ಷಿಸಿಕೊಳ್ಳುತ್ತವೆ. ಎಲೆಗಳು ಪರಿಮಳಯುಕ್ತವಾಗಿ ಸ್ವಾದಯುಕ್ತವಾಗಿರುವುದರಿಂದ ಕೀಟಗಳು ಈ ಮರದ ಎಲೆಗಳನ್ನು ತಿಂದು ಹಾಳು ಮಾಡುತ್ತದೆ. ಬಿಲ್ವ ಪತ್ರದ ಪ್ರತಿಯೊಂದು ಭಾಗವನ್ನೂ ಔಷಧಿಯಾಗಿ ಉಪಯೋಗಿಸುವರು. ಬಿಲ್ವಕಾಯಿಯ ತಿರುಳನ್ನು ಅರೆದುಕಣ್ಣಿಗೆ ಲೇಪಿಸುವುದರಿಂದ ಕಣ್ಣಿನರೋಗಗಳು ನಿವಾರಣೆಯಾಗುತ್ತದೆ. ಮಧುಮೇಹ ರೋಗಕ್ಕೆ ಬಿಲ್ವಪತ್ರೆಯನ್ನು ಬಳಸುವರು. ಇದರ ಎಲೆಯ ರಸವನ್ನು ಬೆಳಗಿನ ಜಾವ ಹಾಲಿನೊಂದಿಗೆ ಬೆರೆಸಿ ಕುಡಿದರೆ ರೋಗ ನಿವಾರಣೆಯಾಗುತ್ತದೆ. ದೇಹದ ಬಲಾಡ್ಯಕ್ಕೆ ಬಿಲ್ವಪತ್ರೆಕಾಯಿ ಉತ್ತಮ ಫಲಕಾರಿ.

ಕಾಯಿಯನ್ನು ಒಣಗಿಸಿ ಎಣ್ಣೆ ತೆಗೆದು ಅದನ್ನು ಉಪಯೋಗಿಸಿದರೆ ಅದಕ್ಕೆ ಬೇಧಿ ನಿಲ್ಲಿಸುವ ಗುಣವಿದೆ. ಮೈಯಲ್ಲಿ ಕುರು, ಹುಳಕಡ್ಡಿ ಎದ್ದಾಗ ಲಿಂಬೆರಸದೊಂದಿಗೆ ಬೇರನ್ನು ಅರೆದು ಕುರುವಿಗೆ ಲೇಪಿಸಿದರೆ ಕೂಡಲೇ ಹಣ್ಣಾಗಿ ಒಡೆಯುತ್ತದೆ. ಬಿಲ್ವ ಎಲೆಯ ರಸವನ್ನು ಕಾಳುಮೆಣಸಿನೊಂದಿಗೆ ಸೇರಿಸಿ ಮಾಡಿದ ಔಷಧದಿಂದ ಕಾಮಾಲೆ ರೋಗ ನಿವಾರಣೆಯಾಗುವುದು. ಬೇರು ಹಾಗೂ ಒಣಶುಂಠಿ ಸೇರಿಸಿ ಕಷಾಯ ಮಾಡಿ ಅರಳು ಸೇರಿಸಿ ಕುಡಿದರೆ ವಾಂತಿ ತಕ್ಷಣ ನಿಲ್ಲುತ್ತದೆ. ಇದರ ಎಲೆ ಅಥವಾ ಕಾಯಿಯನ್ನು ಒಣಗಿಸಿ ಕುಟ್ಟಿ ಪುಡಿ ಮಾಡಿ ಕೆಂಡದ ಮೇಲೆ ಹಾಕಿ ಮನೆಯಲ್ಲಿ ಧೂಪದಂತೆ ಬಳಸುವುದರಿಂದ ನೊಣ, ಸೊಳ್ಳೆ ನುಸಿಗಳು ನಿವಾರಣೆಯಾಗುತ್ತದೆ.

ಮಳೆಗಾಲದಲ್ಲಿ ಉಂಟಾಗುವ ಕಾಲು ಹುಣ್ಣುಗಳು ಮತ್ತು ರಿಂಗ್ ವರ್ಮ್‌ಗಾಗಿ ಇದರ ಎಲೆಯ ರಸ ಅಥವಾ ಬೇರಿನ ಗಂಧವನ್ನು ಹಚ್ಚಬಹುದು. ಬಿಲ್ವಪತ್ರೆಯ ಔಷಧೀಯ ಗುಣಗಳನ್ನು ಆಯುರ್ವೇದ ಗ್ರಂಥಗಳಲ್ಲಿ ವಿವರಿಸಲಾಗಿದೆ. ಪಾಶ್ಚಾತ್ಯ ವೈದ್ಯಕೀಯ ಪದ್ಧತಿಯಲ್ಲಿ ಇದರ ಬೇರು, ಎಲೆ ಹಣ್ಣು ಮೊದಲಾದವು ಕ್ರಿಮಿನಾಶಕ, ಬೂಷ್ಟ್ ನಿವಾರಕವಾಗಿ ಉಪಯೋಗಿಸಲ್ಪಡುತ್ತಿದೆ.